# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-190, ಮಂಗಮ್ಮನಪಾಳ್ಯ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

ಮಾನ್ಯ ನೋಡಲ್ ಅಧಿಕಾರಿ/ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 22.02.2021 ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 190-ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು/ಅಧಿಕಾರಿಗಳು**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ |
|---|---|---|
| 1 | ಶ್ರೀ ಹನುಮಂತರಾಯ ಟಿ. | ಅಧ್ಯಕ್ಷರು/ ನೋಡಲ್ ಅಧಿಕಾರಿಗಳು |
| 2 | ಶ್ರೀ ರವಿ ಡಿ | ಸಂಚಾಲಕರು/ ಕಾರ್ಯದರ್ಶಿಗಳು |
| 3 | ಶ್ರೀಮತಿ ಲಕ್ಷ್ಮೀ ಬಿ | ಸ.ಕಂ.ಅ ಹೆಚ್.ಎಸ್.ಆರ್ ಉಪವಿಭಾಗ |
| 4 | ಶ್ರೀ ಸಾಯಬಣ್ಣ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಶ್ರೀ ರಮೇಶ್ ಡಿ | ಕಿ.ಅ. ವಿದ್ಯುತ್ ವಿಭಾಗ |
| 6 | ಶ್ರೀ ವಿನೋದ್ ಜಿ. | ಹಿರಿಯ ಆರೋಗ್ಯ ಪರಿವೀಕ್ಷಕರು. |
| 7 | ಶ್ರೀ ನರಸಪ್ಪ ಹೆಚ್. | ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು |
| 8 | ಶ್ರೀ ಹೊನ್ನುರ ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 9 | ಶ್ರೀ ಶಿವಕುಮಾರ್ ಎಲ್ | ಮಾರ್ಷಲ್ ವಾರ್ಡ್ ನಂ. 190 |
| 10 | ಶ್ರೀ ನಾಗೇಂದ್ರ | ಸದಸ್ಯರು |
| 11 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು |
| 12 | ಶ್ರೀ ಉಮೇಶ್ ಎಸ್. | ಸದಸ್ಯರು |
| 13 | ಶ್ರೀ ಗೋಪಿನಾಥ.ಕೆ | ಸದಸ್ಯರು |
| 14 | ಶ್ರೀ ಶಂಕರ್ ಎನ್ | ಸದಸ್ಯರು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ ಟಿ ಹನುಮಂತರಾಯ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು, ಅಧ್ಯಕ್ಷರು ವಾರ್ಡ್ ಸಭೆಗೆ ಹಾಜರಾಗಿದ್ದ ಸದಸ್ಯರಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಪ್ರಸ್ತಾಪಿಸಲು ಕೋರಿದರು.

ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ, ಘನತ್ಯಾಜ್ಯ ನಿರ್ವಹಣೆ, ತೋಟಗಾರಿಕೆ, ವಿದ್ಯುತ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬೆಸ್ಕಾಂ ಹಾಗೂ ಇಂಜಿಯರಿಂಗ್ ಎಲ್ಲಾ ಇಲಾಖೆಯು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಹಾಗೂ ಸಾರ್ವಜನಿಕರ ದೂರುಗಳಿಗೆ ಸ್ಪಂದಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ ಸಂ | ಇಲಾಖೆ | ವಿಷಯ |
|---|---|---|
| 1 | **ಘನತ್ಯಾಜ್ಯ (ಆರೋಗ್ಯ) ಇಲಾಖೆ** | • ಹಿಂದಿನ ಸಭೆಯಲ್ಲಿ ತಿಳಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಮಾಂಸದ ಚೀಲದ ತ್ಯಾಜ್ಯವನ್ನು ರಸ್ತೆಯಲ್ಲಿ, ಬೀದಿ ಬದಿಯಲ್ಲಿ ಸುರಿಯುತ್ತಿದ್ದು, ಸುರಿಯುತ್ತಿರುವರಿಗೆ ದಂಡ ವಿಧಿಸಲಾಗುತ್ತಿದೆ ಹಾಗೂ ಮಾಂಸದ ತ್ಯಾಜ್ಯವನ್ನು ಕಸದ ಆಟೋಗಳಿಗೆ ವಿಲೇವಾರಿ ಮಾಡಲು ಸಂಬಂಧಪಟ್ಟ ಅಂಗಡಿ ಮಾಲೀಕರಿಗೆ ಸೂಚಿಸಲಾಗಿದೆ ಹಾಗೂ ನೋಟೀಸ್ ಜಾರಿ ಮಾಡಲಾಗಿದೆವೆಂದು ಕಿ.ಆ.ಪ ರವರು ತಿಳಿಸಿದರು.<br>• ಹಿಂದಿನ ಸಭೆಯಲ್ಲಿ ತಿಳಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಸಂಡೆ ಬಜಾರ ನಡೆಸದಂತೆ ಸ.ಕಾ.ನಿ.ಅ ಹೆಚ್.ಎಸ್.ಆರ್ ಉಪವಿಭಾಗ ರವರು ಪೋಲಿಸ್ ರವರಿಗೆ ಪತ್ರವನ್ನು ಬರೆದಿದ್ದು, ಕ್ರಮವಹಿಸಲಾಗಿದೆ ಎಂದು ಕಿ.ಆ.ಪ ರವರು ತಿಳಿಸಿದರು.<br>• ಹಿಂದಿನ ಸಭೆಯಲ್ಲಿ ತಿಳಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಗೋ ನಿಷೇದ ಕಾಯ್ದೆ ವಿರುದ್ಧ ಅಕ್ರಮವಾಗಿ ನಡೆಸುತ್ತಿರುವ ಮಾಂಸದ ಅಂಗಡಿಗಳನ್ನು ಮುಚ್ಚಿಸಲಾಗಿದ್ದು, ಇನ್ನೂ ಕೆಲವರು ಅಕ್ರಮವಾಗಿ ಮನೆಯಿಂದ ಮಾರಟ ಮಾಡುತ್ತಿದ್ದು, ಪೋಲಿಸ್ ಸಿಬ್ಬಂದಿ ಹಾಗೂ ಬಿಬಿಎಂಪಿ ಸಹಕರದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಕ್ರಮವಾಗಿ ನಡೆಸುತ್ತಿರುವ ಮಾಂಸದ ಅಂಗಡಿಗಳನ್ನು ಮುಚ್ಚಿಸಲು ಕ್ರಮವಹಿಸಲಾಗುವುದೆಂದು ಹಿ.ಆ.ಪ ರವರು ತಿಳಿಸಿದರು.<br>• ವಾರ್ಡ್ ವ್ಯಾಪ್ತಿಯ ಫಾಸ್ಟ್ ಫುಡ್/ ಹೋಟೆಲ್ ಮತ್ತು ಬಾರ್ ರೆಸ್ಟೋರೆಂಟ್‌ರಲ್ಲಿ ಕರೆದಿರುವ ಎಣ್ಣೆಯಲ್ಲಿ ಪದಾರ್ಥವನ್ನು ಮಾಡಿ ನೀಡುತ್ತಿದ್ದು, ಇದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇರುವುದರಿಂದ ಸಂಬಂಧಪಟ್ಟ (ಎಫ್.ಎಸ್.ಎಸ್.ಎ)/ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು.** |
| 2 | **ತೋಟಗಾರಿಕೆ ಇಲಾಖೆ.** | • ಹಿಂದಿನ ಸಭೆಯಲ್ಲಿ ಪ್ರಾಸ್ತಾಪಿಸಿರುವ ವಿಷಯಗಳ ಬಗ್ಗೆ ಐ.ಟಿ.ಐ ಬಡಾವಣೆಯ ಉದ್ಯಾನವನಕ್ಕೆ ನೀರು ಹಾಕುತಿರುವುದಾಗಿ ತೋಟಗಾರಿಕೆ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿರುತ್ತಾರೆ.<br>• ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ಐ.ಟಿ.ಐ ಬಡಾವಣೆಯಲ್ಲಿ ಅಭಿವೃದ್ಧಿಯಾಗದ ಉದ್ಯಾನವನ್ನು ಸ್ಥಳ ಪರಿಶೀಲಿಸಿ ಪ್ರಸ್ತುತ ಸಾಲಿನ ಕ್ರಿಯಾಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲಾಗುವುದೆಂದು ಪರಿವೀಕ್ಷಕರು ತಿಳಿಸಿರುತ್ತಾರೆ.<br>• ದಿನಾಂಕ: 21.12.2020 ರಂದು ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿರುವಂತೆ ಸಹ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಉಪವಿಭಾಗ ತೋಟಗಾರಿಕೆ ಅಧಿಕಾರಿಗಳು, ಅರಣ್ಯಾಧಿಕಾರಿಗಳು ಪೋಲಿಸ್ ಸಿಬ್ಬಂದಿ ಮತ್ತು ವಾರ್ಡ್ ಸಮಿತಿ ಸದಸ್ಯರ ಸಹಕಾರದೊಂದಿಗೆ ಪ್ರತಿ ಮನೆಗೆ ಒಂದು ಗಿಡವನ್ನು ನೀಡಿ ಅರಿವು ಮೂಡಿಸುವಂತೆ ಮತ್ತೊಮ್ಮೆ ಸಭೆಯಲ್ಲಿ ಸದಸ್ಯರು ಪ್ರಸ್ತಾಪಿಸಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ<br>**ಕ್ರಮ ತೋಟಗಾರಿಕೆ ನಿರ್ವಹಣೆ ಪರಿವೀಕ್ಷಕರು** |

Scanned with Car

| | | |
|---|---|---|
| 3 | **ಬಿ.ಡಬ್ಲ್ಯೂ.ಎಸ್.ಎಸ್.ಬಿ** | • ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಐ.ಟಿ.ಐ ಬಡಾವಣೆ ರಸ್ತೆಯಲ್ಲಿ ವೆಟ್‌ಮಿಕ್ಸ್ ಹಾಕಲು 1-2 ದಿನಗಳಲ್ಲಿ ಕ್ರಮ ವಹಿಸಲಾಗುವುದೆಂದು ಸ.ಅ. ರವರು ತಿಳಿಸಿರುತ್ತಾರೆ.<br>• ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಹೊಸಪಾಳ್ಯ ರಸ್ತೆ ವಿದ್ಯುತ್ ಚಿತಗಾರ ರಸ್ತೆಯ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ಕ್ರಮ ವಹಿಸಲಾಗುತ್ತಿದೆಂದು ಸ.ಅ. ರವರು ತಿಳಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಮೀಟರ್ ಅಳವಡಿಸಿಕೊಳ್ಳದೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಂಡಿರುವವರನ್ನು ಸರ್ವೆ ಮಾಡಿ ಬಿ.ಎಂ.ಟಿ.ಎಫ್ ರವರಿಗೆ ಕಾನೂನು ಕ್ರಮ ಜರುಗಿಸುವಂತೆ ಪತ್ರ ಬರೆಯಲು ಹಾಗೂ ಅನಧಿಕೃತವಾಗಿ ಅಳವಡಿಸಿಕೊಂಡಿರುವ ಮೀಟರ್‌ಗಳ ಸಂಪರ್ಕವನ್ನು ಕಡಿತಗೊಳಿಸಲು ವಾರ್ಡ್ ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಸ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ** |
| 4 | **ಕಂದಾಯ ವಿಭಾಗ** | • ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ತೆರಿಗೆ ಪರಿಷ್ಕರಣೆ ಕಂದಾಯ ಪಾವತಿಸುವಂತೆ ಸೂಚನೆ ನೀಡಲಾಗಿದ್ದು, ಕ್ರಮ ವಹಿಸಲಾಗುತ್ತಿದೆಂದು ಸ.ಕ.ಅ. ರವರು ತಿಳಿಸಿರುತ್ತಾರೆ.<br>**ಕ್ರಮ : ಸ.ಕ.ಅ. ಹೆಚ್.ಎಸ್.ಆರ್ ಉಪವಿಭಾಗ** |
| 5 | **ಕಾಮಗಾರಿ** | • ವಾರ್ಡ್ ವ್ಯಾಪ್ತಿಯ ಮುಂಗಮ್ಮನಪಾಳ್ಯ ಕೆರೆಯ ಸರ್ವೆ ಸಂಖ್ಯೆ: 19 ರಲ್ಲಿ 7 ಎಕರೆ 29 ಗುಂಟೆ ಜಾಗವಿದ್ದು, ಕೆರೆಯ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಕೆ.ಎಂ.ಸಿ. ಕಾಯ್ದೆ ಪ್ರಕಾರ ಕ್ರಮವಹಿಸಲು ಹಾಗೂ ಸದರಿ ಕಟ್ಟಡದ ಕುಡಿಯುವ ನೀರಿನ, ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಸಂಬಂಧಪಟ್ಟ ಇಲಾಖೆ ಪತ್ರ ಬರೆಯುವಂತೆ ಸದಸ್ಯರು ಕೋರಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ ಹೊಸಪಾಳ್ಯ ಗ್ರಾಮದಲ್ಲಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣವಿದ್ದು, ಸದರಿ ನಿಲ್ದಾಣದಲ್ಲಿ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ Parking ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಖಾಸಗಿ ವ್ಯಕ್ತಿಗಳು ನಿಲ್ದಾಣವನ್ನು ಅಕ್ರಮಿಸಿ ಖಾಸಗಿ ನಿಲ್ದಾಣವಾಗಿ ಉಪಯೋಗಿಸುತ್ತಿದ್ದು, Parking ಶುಲ್ಕವನ್ನು ವಸೂಲಾತಿ ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ಸದಸ್ಯರು ತಿಳಿಸಿರುತ್ತಾರೆ.<br>ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>ಕ್ರಮ: ಸ.ಅ. ವಾರ್ಡ್ ನಂ. 190. |

ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ವಾರ್ಡ್ ನಂ. 190

ಅಧ್ಯಕ್ಷರು/ ~~ನೋಡಲ್ ಅಧಿಕಾರಿಗಳು~~
ವಾರ್ಡ್ ನಂ. 190

Scanned with Car